ಓ.ಎಸ್. 81/2013
ಡಿ.ಡಬ್ಲ್ಯೂಃ-1

**ದಿನಾಂಕಃ 26.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎಸ್.ಹೆಚ್. ವಕೀಲರಿಂದಃ

ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಪ್ರತಿವಾದಿಗಳು ಈ ದಾವೆಯನ್ನು ಹೂಡುವ ಪೂರ್ವದಲ್ಲಿ ಜಂಟಿ ಸ್ವಾಧೀನಾನುಭವದಲ್ಲಿದ್ದರು ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತು ಮೂಲತಃ ನನ್ನ ತಾತ ನೂರುದ್ದೀನ್ ಸಾಬ್‌ರವರಿಗೆ ಸೇರಿತ್ತು ಎಂದು ಸೂಚಿಸುವುದು ಸರಿ. ಕೈರುಂಭಿ ನನ್ನ ಅಜ್ಜಿ. 1976-77 ರಿಂದ 1991-92 ರವರೆಗೆ ಕೈರುಂಭಿರವರು ವಾದಿ ಮತ್ತು ಪ್ರತಿವಾದಿಗಳೊಂದಿಗೆ ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನಾನುಭವದಲ್ಲಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನ್ನ ತಾತ ಮಾರಾಟ ಮಾಡಿದ 1 ಎಕರೆಯನ್ನು ಹೊರತು ಪಡಿಸಿ ಉಳಿದ ಜಮೀನಿನಲ್ಲಿ ಜಂಟಿಯಾಗಿ ಸ್ವಾಧೀನದಲ್ಲಿದ್ದರು ಎಂದು ಉತ್ತರಿಸಿರುತ್ತಾರೆ.

**2.** ದಾವಾ ಸರ್ವೆ ನಂಬರ್‌ನಲ್ಲಿ ನನ್ನ ತಂದೆ 1972 ರಲ್ಲಿ ಸಮೀವುಲ್ಲಾರವರಿಂದ 1 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ. ದಿಃ12.12.1972 ರಂದು ನನ್ನ ತಂದೆ ಸಮೀವುಲ್ಲಾರವರಿಂದ 1 ಎಕರೆ ಜಮೀನನ್ನು ಖರೀದಿ ಮಾಡಿರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಕ್ರಯ ಪತ್ರ ಹಾಜರು ಪಡಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ . ಸದರಿ ಜಮೀನನ್ನು ಎಷ್ಟು ಹಣ ನೀಡಿ ಖರೀದಿ ಮಾಡಿರುತ್ತಾರೆಂದು ಹೇಳಲು ಆಗುವುದಿಲ್ಲ. ದಿಃ15.02.1978 ರ ಕ್ರಯ ಪತ್ರದಲ್ಲಿ ನನ್ನ ತಂದೆ ಮೂರ್ತೂರ್ ಸಾಬ್ ರವರಿಂದ ನನ್ನ ತಂದೆ ಜಮೀನನ್ನು ಖರೀದಿ ಮಾಡಿರುತ್ತಾರೆ. ದಿನಾಂಕ 25.07.1978 ರ ಕ್ರಯ ಪತ್ರದಡಿಯಲ್ಲಿ ಯಾರು ಯಾರಿಂದ ಜಮೀನನ್ನು ಖರೀದಿ ಮಾಡಿರುತ್ತಾರೆಂದು ಹೇಳಲು ಆಗುವುದಿಲ್ಲ.

**3.** ದಾವಾ ಸ್ವತ್ತಿನಲ್ಲಿ ಈ ದಾವೆಯನ್ನು ಹೂಡುವ ಪೂರ್ದಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ಆಗಿರುವುದಿಲ್ಲ. ನನ್ನ ತಂದೆ

ಸರ್ಕಾರಿ ನೌಕರರಾಗಿರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ಯಾವುದೇ ಆದಾಯ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಎಣ್ಣೆ ಮತ್ತು ಹುಣಸೇಹಣ್ಣಿನ ವ್ಯಾಪಾರ ಮಾಡುತ್ತಿದ್ದರು ಅದರಿಂದ ನನ್ನ ತಂದೆಗೆ ಆದಾಯ ಇತ್ತು ಎಂದು ಉತ್ತರಿಸಿರುತ್ತಾರೆ. ಸದರಿ ವಿಚಾರವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇನೆ. ನನ್ನ ತಂದೆಗೆ ವೈಯ್ಯುಕ್ತಿಕ ಆದಾಯ ಇಲ್ಲದ ಕಾರಣ ವಾದಿ ಮತ್ತು ಇತರೇ ಪ್ರತಿವಾದಿಯರು ದುಡಿದು ನೀಡಿದ ಹಣದಿಂದ ನನ್ನ ತಂದೆ ಅವರ ಹೆಸರಿನಲ್ಲಿ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**4.** ವಾದಿ ಮತ್ತು 1 ನೇ ಪ್ರತಿವಾದಿ ಜಂಟಿಯಾಗಿ 1 ಎಕರೆ 20 ಗುಂಟೆ ಖರೀದಿ ಮಾಡಲು ವಾದಿಗೆ ಯಾವುದೇ ಆದಾಯ ಇರಲಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರ ಬಗ್ಗೆ ನನಗೆ ಗೊತ್ತಿರುವುದಿಲ್ಲ ನನ್ನ ತಂದೆಗೆ ಆದಾಯ ಇತ್ತು ಎಂದು ಉತ್ತರಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಜಂಟಿಯಾಗಿ ಸಾಗುವಳಿ ಮಾಡುತ್ತಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಸಮವಾದ ಹಿಸ್ಸೆ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳಿಗೆ ಸಮವಾದ ಹಿಸ್ಸೆ ಇರುತ್ತದೆ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ